# ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/1057/2021
ಮಂಡನಾಧಿಕಾರಿಗಳ ಶಾಖೆ, ಎಆರ್‌ಇ-18 ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 22/09/2021

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12 (3) ರನ್ವಯ ಶಿಫಾರಸ್ಸು ವರದಿ

ವಿಷಯ: ಶ್ರೀ ನರಸಿಂಗ್ ಬಿನ್ ಗಣಪತಿ ಚೌದರಿ, ಪ್ರಭಾರ ಜಿಲ್ಲಾ ವ್ಯವಸ್ಥಾಪಕರು, ಡಾ. ಬಿ.ಆರ್. ಅಂಬೇಡ್ಕರ ಅಭಿವೃದ್ಧಿ ನಿಗಮ (ಮೂಲ ಹುದ್ದೆ ತಾಲೂಕಾ ಅಭಿವೃದ್ಧಿ ಅಧಿಕಾರಿಗಳು, ಗ್ರೇಡ್-2,) ಯಾದಗಿರಿ ಜಿಲ್ಲೆ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧದ ನಡವಳಿ ಕುರಿತು.

*****

ಯಾದಗಿರಿ ಜಿಲ್ಲೆ, ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು (ಇನ್ನು ಮುಂದೆ 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ ಶ್ರೀ ನರಸಿಂಗ್ ಬಿನ್ ಗಣಪತಿ ಚೌದರಿ, ಪ್ರಭಾರ ಜಿಲ್ಲಾ ವ್ಯವಸ್ಥಾಪಕರು, ಡಾ. ಬಿ.ಆರ್. ಅಂಬೇಡ್ಕರ ಅಭಿವೃದ್ಧಿ ನಿಗಮ ಮೂಲ ಹುದ್ದೆ ತಾಲೂಕಾ ಅಭಿವೃದ್ಧಿ ಅಧಿಕಾರಿಗಳು, ಗ್ರೇಡ್-2, ಯಾದಗಿರಿ ಜಿಲ್ಲೆ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ಶ್ರೀ ಶ್ರೀನಾಥ ಬಿನ್ ಬಸ್ಸಣ್ಣ ಬಿರಾದಾರ, ಸಾ: ಬೈಲಾಪುರ ಯಾದಗಿರಿ ತಾಲ್ಲೂಕು ಮತ್ತು ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ). ಇವರು ಎದುರುದಾರರನ್ನು ಭೇಟಿ ಮಾಡಿದಾಗ ದೂರುದಾರರ ಕೆಲಸವನ್ನು ಮಾಡಿಕೊಡಲು ಲಂಚದ ಹಣ ಕೇಳಿ ಪಡೆದುಕೊಂಡು ದುರ್ನಡತೆ ತೋರಿಸಿರುತ್ತಾರೆ ಎಂದು ಸಲ್ಲಿಸಿದ ವರದಿಯ ಮೇರೆಗೆ, ದಾಖಲೆಗಳನ್ನು ಪರಿಶೀಲಿಸಿ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7(2) ರನ್ವಯ ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಳ್ಳಲಾಗಿದೆ.

2) ದೂರಿನ ಸಂಕ್ಷಿಪ್ತ ಸಾರಾಂಶ:-

i. ದೂರುದಾರರಾದ ಶ್ರೀ ಶ್ರೀನಾಥ ಬಿನ್ ಬಸ್ಸಣ್ಣ ಬಿರಾದಾರ, ಸಾ: ಬೈಲಾಪುರ ಯಾದಗಿರಿ ತಾಲ್ಲೂಕು ಮತ್ತು ಜಿಲ್ಲೆ ಇವರು. ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮ, ಯಾದಗಿರಿ ಜಿಲ್ಲೆ ರವರಲ್ಲಿ ಕಾರ್ ಲೋನ್ ಮತ್ತು ಸಹಾಯಧನ (ಟೂರಿಸ್ಟ್ ಟ್ಯಾಕ್ಸಿಗಾಗಿ) ದಿನಾಂಕ 22/05/2017 ರಂದು ಅರ್ಜಿ ಸಲ್ಲಿಸಿದ್ದು ಅದರ ಪ್ರಕಾರ ದೂರುದಾರರು ಫಲಾನುಭವಿಯಾಗಿ ಆಯ್ಕೆಯಾಗಿರುತ್ತಾರೆ. ದೂರುದಾರರು ಸದರಿ ನಿಗಮದಿಂದ ಮೂರು ಲಕ್ಷ ರೂ. ಸಬ್ಸಿಡಿ ಮಂಜೂರು ಮಾಡಿಕೊಡಲು ಎದುರುದಾರರಾದ ಶ್ರೀ ನರಸಿಂಗ್ ಗಣಪತಿ ಚೌಧರಿ, ಪ್ರಭಾರ ಜಿಲ್ಲಾ ವ್ಯವಸ್ಥಾಪಕರು ಡಾ. ಬಿ.ಆರ್. ಅಂಬೇಡ್ಕರ ಅಭಿವೃದ್ಧಿ ನಿಗಮ (ಮೂಲ ಹುದ್ದೆ ತಾಲೂಕಾ ಅಭಿವೃದ್ಧಿ ಅಧಿಕಾರಿಗಳು, ಗ್ರೇಡ್-2) ಯಾದಗಿರಿ ರವರಲ್ಲಿ ಕೇಳಿದಾಗ ಎದುರುದಾರರು ಒಟ್ಟು ರೂ. 25,000/- ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ. ಆಗ ದೂರುದಾರರು ಅಷ್ಟಾಗುವುದಿಲ್ಲ, ಬಡವನಿದ್ದೇನೆ ಎಂದು ಹೇಳಿಕೊಂಡಾಗ, ಸದ್ಯ ಬ್ಯಾಂಕಿಗೆ ಪತ್ರ ಕೊಡುವ ಕುರಿತು 8,000/- ರೂ. ಲಂಚದ ಹಣ ತೆಗೆದುಕೊಂಡು ಬ್ಯಾಂಕಿಗೆ ಕಾರ್ ಲೋನ್ ಮಾಡಲು ಪತ್ರ ಕೊಟ್ಟಿರುತ್ತಾರೆ ಮತ್ತು 15,000/- ರೂ.ಗಳನ್ನು ನಂತರ ಕೊಡುವಂತೆ ದೂರುದಾರರಿಗೆ ಹೇಳಿ ಕಳುಹಿಸಿರುತ್ತಾರೆ. ಹೊರ ಮೂಲ ಗುತ್ತಿಗೆಯ ಆಧಾರದ ಮೇಲೆ ಎದುರುದಾರರ ಕಛೇರಿಯಲ್ಲಿ ದಲಾಯತ್/ಕ್ಲರ್ಕ್ ಆಗಿ ಕೆಲಸ ಮಾಡುವ ಮಹಾಂತೇಶ್ ಬಿನ್ ಹನಮಂತರಾಯ ಹಂಗರ್ಗಿರವರಿಗೆ ದೂರುದಾರರು ಫೋನ್ ಮಾಡಿ ಫೈಲ್ ಬಗ್ಗೆ ಕೇಳಿದಾಗ ಮಹಾಂತೇಶ್‌ರವರು ಫೈಲ್ ರೆಡಿ ಮಾಡಿಕೊಡಲು 5,000/- ರೂ. ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ. ಈ ಬಗ್ಗೆ ದಿನಾಂಕ 24/02/2018 ರಂದು ದೂರುದಾರರು ತನ್ನ ಮೊಬೈಲ್‌ನಿಂದ

ಮಹಾಂತೇಶ್‌ರವರ ಮೊಬೈಲಿಗೆ ಕರೆ ಮಾಡಿದಾಗ ಮಹಾಂತೇಶ್‌ರವರು ಎದುರುದಾರರಿಗೆ 10,000/- ರೂ. ಕೊಡಲು ಹೇಳಿರುತ್ತಾರೆ. ಮತ್ತು ತನಗೆ 5,000/- ರೂ. ಗಳನ್ನು ಕೊಡುವಂತೆ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ. ದೂರುದಾರರು ಬಡವನಿದ್ದೇನೆ, ಅಷ್ಟು ಕೊಡಲು ಆಗುವುದಿಲ್ಲ ಅಂತ ಅಂದಾಗ ದೂರುದಾರರಿಗೆ ಮಹಾಂತೇಶನು ಝಡ್.ಪಿ ಹತ್ತಿರ ಹೋಗಿ ಫೋನ್ ಮಾಡಿಸಿ ಕಡಿಮೆ ಮಾಡಿಸು, ನನಗೆ 5,000/- ರೂ. ಕೊಡು ಅಂತ ಲಂಚದ ಹಣಕ್ಕೆ ಬೇಡಿಕೆ ಇಟ್ಟ ಸಂಭಾಷಣೆಯು ದೂರುದಾರರ ಮೊಬೈಲ್‌ನಲ್ಲಿ ರೆಕಾರ್ಡ್ ಆಗಿರುತ್ತದೆ.

ii. ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದೇ ಇದ್ದುದರಿಂದ, ದಿನಾಂಕ 27/02/2018 ರಂದು ಬೆಳಿಗ್ಗೆ 11-00 ಘಂಟೆಗೆ ಭ್ರಷ್ಟಾಚಾರ ನಿಗ್ರಹ ದಳ ಯಾದಗಿರಿ ಪೊಲೀಸ್ ಠಾಣೆಗೆ ಹಾಜರಾಗಿ ತನಿಖಾಧಿಕಾರಿಯ ಮುಂದೆ ದೂರನ್ನು ಮತ್ತು ರೆಕಾರ್ಡ್ ಆಗಿರುವ ಸಂಭಾಷಣೆಯ ಮೊಬೈಲನ್ನು ಹಾಜರುಪಡಿಸಿದಾಗ ಎದುರುದಾರರ ವಿರುದ್ಧ ಸದರಿ ಪೊಲೀಸ್ ಠಾಣೆಯಲ್ಲಿ ಮೊ. ಸಂ. 02/2018 ರಂತೆ ಪಿ.ಸಿ. ಕಾಯಿದೆ ಕಲಂ 7 ರಂತೆ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ.

iii. ದಿನಾಂಕ 27/02/2018 ರಂದು ಹಣ ವಹಿಸಿಕೊಡುವ ಪಂಚನಾಮೆ ಕಾಲಕ್ಕೆ ದೂರುದಾರರು ಹೊರ ಗುತ್ತಿಗೆ ನೌಕರರಾದ ಶ್ರೀ ಮಹಾಂತೇಶ ಕ್ಲರ್ಕ್ ಇವರಿಗೆ ಫೋನ್ ಮಾಡಿದಾಗ ಅವರು ಫೈಲ್ ರೆಡಿ ಮಾಡಿಕೊಡಲು 5,000/- ರೂ. ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ. ಈ ಬಗ್ಗೆ ದಿ: 24/02/2018 ರಂದು ಮಹಾಂತೇಶರವರಿಗೆ ದೂರುದಾರರು ತಮ್ಮ ಮೊಬೈಲ್‌ನಿಂದ ಮಹಾಂತೇಶ್‌ರವರ ಮೊಬೈಲಿಗೆ ಕರೆ ಮಾಡಿದಾಗ ಡಿ.ಎಂ. ಗೆ 10,000/- ರೂ. ಕೊಡು, ನನಗೆ 5,000/- ರೂ. ಕೊಡು ಅಂತ ಲಂಚದ ಹಣ ಕೇಳಿದ್ದು ದೂರುದಾರರು ನಾನು ಬಡವನಿದ್ದೇನೆ, ಅಷ್ಟು

ಕೊಡಲು ಆಗುವುದಿಲ್ಲ ಅಂತ ಅಂದಾಗ ನಿಮ್ಮ ಝಡ್.ಪಿ. ಹತ್ತಿರ ಹೋಗಿ ಫೋನ್ ಮಾಡಿಸಿ ಕಡಿಮೆ ಮಾಡಿಸಿ, ನನಗೆ 5,000/- ರೂ. ಕೊಡು ಅಂತ ಲಂಚದ ಹಣಕ್ಕೆ ಬೇಡಿಕೆ ಇಟ್ಟ ಸಂಭಷಣೆಯನ್ನು ದೂರುದಾರರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಆಗಿರುತ್ತದೆ ಎಂದು ಹೇಳಿ ಸಂಭಾಷಣೆ ದಾಖಲಾದ ಮೊಬೈಲ್‌ನ್ನು ಹಾಜರುಪಡಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ದೂರುದಾರರಿಗೆ ಎದುರುದಾರರಿಗೆ ಲಂಚದ ಹಣ ಕೊಡುವ ವೇಳೆ ವಾಯ್ಸ್ ರೆಕಾರ್ಡ್ ಮಾಡಲು ಕಛೇರಿಯಲ್ಲಿದ್ದ ಸೋನಿ ವಾಯ್ಸ್ ರೆಕಾರ್ಡರನ್ನು ಕೊಟ್ಟು ರೆಕಾರ್ಡ್ ಮಾಡಲು ತಿಳಿಸಿರುತ್ತಾರೆ.

iv. ಅದೇ ದಿನ ಅಂದರೆ ದಿನಾಂಕ 27/02/2018 ರಂದು ತನಿಖಾಧಿಕಾರಿ ಹಾಗೂ ಪಂಚರ ಜೊತೆಗೆ ಬಂದು ತನೀಖಾಧಿಕಾರಿಯವರ ನಿರ್ದೇಶನದಂತೆ ಎದುರುದಾರರು ಕರ್ತವ್ಯ ನಿರ್ವಹಿಸುತ್ತಿದ್ದ ಮಿನಿ ವಿಧಾನ ಸೌಧದ 2ನೇ ಅಂತಸ್ತಿನ 'ಸಿ' ಬ್ಲಾಕ್‌ನಲ್ಲಿರುವ ಛೇಂಬರಿಗೆ ಹೋಗಿ ದೂರುದಾರರು ಎದುರುದಾರರನ್ನು ಮಾತನಾಡಿಸಿದಾಗ ಅವರ ಕಛೇರಿಯಲ್ಲಿ ಚಾಲಕನಾಗಿ ಹೊರ ಮೂಲ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುವ ಮಹೇಶನಿಗೆ ಲಂಚದ ಹಣ 10,000/- ರೂ. ಗಳನ್ನು ಕೆಳಗಡೆ ಹೋಗಿ ಕೊಡಲು ತಿಳಿಸಿರುತ್ತಾರೆ. ಅದರಂತೆ ದೂರುದಾರರು ಕೆಳಗಡೆ ಇಳಿದು ಬಂದು ವಾಹನದ ನಿಲುಗಡೆ ಸ್ಥಳಕ್ಕೆ ಹೋಗಿ ಅಲ್ಲಿ ಬೊಲೆರೋ ವಾಹನ ನಂ. ಕೆಎ-33-ಎಂ.-3090ನೇದರ ಹತ್ತಿರ ಹೋಗಿ ಚಾಲಕನ ಸೀಟಿನಲ್ಲಿ ಕುಳಿತಿದ್ದ ಮಹೇಶನಿಗೆ ಪಿನಾಪ್ತಲಿನ್ ಪೌಡರ್ ಲೇಪಿತ ಲಂಚದ ಹಣವಾದ ರೂ. 10,000/- ಗಳನ್ನು ನೀಡಿ ದೂರುದಾರರಿಗೆ ಹಣ ವಹಿಸಿಕೊಡುವ ಪಂಚನಾಮೆ ಕಾಲಕ್ಕೆ ನೀಡಿದ ಸೂಚನೆಯ ಪ್ರಕಾರ ತನ್ನ ತಲೆ ಕೂದಲುಗಳನ್ನು ಕೆರೆದುಕೊಳ್ಳುವುದರ ಮೂಲಕ ನಿಗದಿತ ಸಿಗ್ನಲ್ ನೀಡಿರುತ್ತಾರೆ. ತನಿಖಾಧಿಕಾರಿಯವರು ಲಂಚದ ಹಣದ ಬಗ್ಗೆ ವಿಚಾರಿಸಿದಾಗ ಮಹೇಶರವರು ಎದುರುದಾರರು ದೂರುದಾರರಿಂದ 10,000/- ರೂ.

ಲಂಚದ ಹಣವನ್ನು ತೆಗೆದುಕೊಳ್ಳುವಂತೆ ತಿಳಿಸಿದ ಪ್ರಕಾರ ತಾನು ಅವರ ಛೇಂಬರಿನಿಂದ ಕೆಳಗೆ ಇಳಿದು ಜೀಪಿನಲ್ಲಿ ಹೋಗಿ ಕುಳಿತುಕೊಂಡಾಗ ದೂರುದಾರರು ಬಂದು 10,000/- ರೂ. ಲಂಚದ ಹಣವನ್ನು ಕೊಟ್ಟಿರುತ್ತಾರೆಂದು ತಿಳಿಸಿರುತ್ತಾರೆ. ನಂತರ ಮಿನಿ ವಿಧಾನ ಸೌಧದ 2ನೇ ಅಂತಸ್ತಿನ "ಸಿ' ಬ್ಲಾಕ್ ನಂ. 9 ರಲ್ಲಿರುವ ಮಹಾಂತೇಶ್‌ರವರಿಗೆ ಫಿನಾಪ್ತಲಿನ್ ಪೌಡರ್ ಲೇಪಿತ ಲಂಚದ ಹಣ 5,000/- ರೂ. ಗಳನ್ನು ಅವರ ಕೊಠಡಿಯಲ್ಲಿ ದೂರುದಾರರು ನೀಡಿ ದೂರುದಾರರಿಗೆ ಹಣ ವಹಿಸಿಕೊಡುವ ಪಂಚನಾಮೆ ಕಾಲಕ್ಕೆ ನೀಡಿದ ಸೂಚನೆಯ ಪ್ರಕಾರ ತನ್ನ ತಲೆ ಕೂದಲುಗಳನ್ನು ಕೆರೆದುಕೊಳ್ಳುವುದರ ಮೂಲಕ ನಿಗಧಿತ ಸಿಗ್ನಲ್ ನೀಡಿರುತ್ತಾರೆ. ವಾಹನ ಚಾಲಕ ಮಹೇಶ ಮತ್ತು ಕ್ಲರ್ಕ್ ಮಹಂತೇಶ್ ಇವರನ್ನು ಎದುರುದಾರರ ಛೇಂಬರಿಗೆ ಕರೆದುಕೊಂಡು ಬಂದು ಸದರಿ ಲಂಚದ ಹಣವನ್ನು ತನಿಖಾಧಿಕಾರಿಯವರು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯವರು ಪಂಚನಾಮೆ ಕಾಲಕ್ಕೆ ಮಹಾಂತೇಶ್‌ರವರ ಬಲಗೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆಯಿಸಿದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ಮಹಾಂತೇಶ್‌ರವರ ದ್ರಾವಣಗಳನ್ನು ಹಾಗೂ ಪ್ಯಾಂಟನ್ನು ಎಡಗೈ ಬೆರಳುಗಳನ್ನು ಇನ್ನೊಂದು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆಯಿಸಿದಾಗ ಅದು ಯಾವುದೇ ರೀತಿ ಬದಲಾವಣೆ ಆಗಿರುವುದಿಲ್ಲ. ತನಿಖಾಧಿಕಾರಿಗಳು ಮಹಾಂತೇಶ್‌ರವರಿಗೆ ಬದಲೀ ಪ್ಯಾಂಟಿನ ವ್ಯವಸ್ಥೆ ಮಾಡಿ ಆತನು ಧರಿಸಿದ ಬಿಳಿ ಬಣ್ಣದ ಪ್ಯಾಂಟಿನ ಹಿಂದಿನ ಬಲಗಡೆ ಕಿಸೆಯನ್ನು ಹೊರತೆಗೆದು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ತನಿಖಾಧಿಕಾರಿಗಳು ಪಂಚರ ಸಮಕ್ಷಮ ಅಮಾನತ್‌ಪಡಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಗಳು

ಮಹಾಂತೇಶನಿಗೆ ಸ್ವರಕ್ಷಣಾತ್ಮಕ ಹೇಳಿಕೆ ಬರೆದುಕೊಡಲು ತಿಳಿಸಿದಾಗ ಆತನು ತನ್ನ ಸ್ವರಕ್ಷಣಾತ್ಮಕ ಹೇಳಿಕೆಯಲ್ಲಿ "ನಾನು ಹೇಳುವುದೇನೆಂದರೆ ನಾನು ಶ್ರೀನಾಥರವರಿಂದ ಯಾವುದೇ ಮೊತ್ತ ಬೇಡಿಕೆ ಇಡದೆ ತಾನೇ ತಾನಾಗಿ ನಾನು ನನ್ನ ಟೇಬಲ್ ಮೇಲೆ ಕುಳಿತ ಸಂದರ್ಭದಲ್ಲಿ ಕೈಯಲ್ಲಿ ಇಟ್ಟು ಓಡಿ ಹೋಗಿ ಪೊಲೀಸ್ ಸಾಹೇಬರಿಗೆ ಸುದ್ದಿ ಮುಟ್ಟಿಸಿದ್ದಾರೆ." ಎಂದು ಬರೆದುಕೊಟ್ಟಿದ್ದನ್ನು ತನಿಖಾಧಿಕಾರಿಗಳು ಅಮಾನತ್‌ಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಗಳು ಮಹೇಶನ ಬಲಗೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆಯಿಸಿದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆ ಆಗಿರುತ್ತದೆ. ಮಹೇಶನ ಎಡಗೈ ಬೆರಳುಗಳನ್ನು ಇನ್ನೊಂದು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆಯಿಸಿದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆ ಆಗಿರುತ್ತದೆ. ತನಿಖಾಧಿಕಾರಿಗಳು ಮಹೇಶ್‌ರವರಿಗೆ ಬದಲೀ ಶರ್ಟನ ವ್ಯವಸ್ಥೆ ಮಾಡಿ ಅವರು ಧರಿಸಿದ ಕಂದು ನೀಲಿ, ತಿಳಿ ನೀಲಿ, ಬಿಳಿ ಗೆರೆಯುಳ್ಳ ಚೆಕ್ ಶರ್ಟನ ಕಿಸೆಯನ್ನು ಹೊರ ತೆಗೆದು ಇನ್ನೊಂದು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ನಂತರ ತನಿಖಾಧಿಕಾರಿಗಳು ಮಹೇಶನಿಗೆ ಸ್ವರಕ್ಷಣಾತ್ಮಕ ಹೇಳಿಕೆ ಬರೆದುಕೊಡಲು ತಿಳಿಸಿದಾಗ ಅವರು ತನ್ನ ಸ್ವರಕ್ಷಣಾತ್ಮಕ ಹೇಳಿಕೆಯಲ್ಲಿ " ಶ್ರೀನಾಥ ಎನ್ನುವ ವ್ಯಕ್ತಿಯ ಮುಖ ನೋಡಿದ್ದೇ ಮೊದಲನೇ ಸಲ ನಾನು ಕಛೇರಿಗೆ ಬಂದು ಅಧಿಕಾರಿಯನ್ನು ಬಿಟ್ಟು ವಾಹನ ನೆರಳಿಗೆ ಬಿಟ್ಟು ಕುಳಿತಿರುತ್ತೇನೆ. ಆಗ ಶ್ರೀನಾಥ ಎನ್ನುವ ವ್ಯಕ್ತಿ ಬಂದು ನರಸಿಂಗ್ ಸರ್ ಇಲ್ಲೇ ಕೊಟ್ಟು ಹೋಗಲು ಹೇಳಿದ್ದಾರೆ ಎಂದು ನನ್ನ ಕೈಯಲ್ಲಿ 10,000/- ರೂ. ಗಳನ್ನು ಕೊಟ್ಟು ಹೋದರು" ಎಂದು ಬರೆದುಕೊಟ್ಟಿದ್ದನ್ನು ತನಿಖಾಧಿಕಾರಿಗಳು ಪಂಚರ ಸಮಕ್ಷಮ ಅಮಾನತ್‌ಪಡಿಸಿಕೊಂಡಿರುತ್ತಾರೆ. ಎದುರುದಾರರಿಗೆ ಸ್ವರಕ್ಷಣಾತ್ಮಕ

ಹೇಳಿಕೆ ಬರೆದುಕೊಡಲು ತಿಳಿಸಿದಾಗ ಅವರು ತನ್ನ ಸ್ವರಕ್ಷಣಾತ್ಮಕ ಹೇಳಿಕೆಯಲ್ಲಿ "ಶ್ರೀನಾಥ ಸಾ: ಬೈಲಾಪುರ ರವರಿಂದ ಯಾವುದೇ ರೀತಿಯ ಸಂಭಾವನೆ ನಾನು ಕೇಳಿರುವುದಿಲ್ಲ" ಎಂದು ಬರೆದುಕೊಟ್ಟಿದ್ದನ್ನು ತನಿಖಾಧಿಕಾರಿಗಳು ಪಂಚರ ಸಮಕ್ಷಮ ಅಮಾನತ್‌ಪಡಿಸಿಕೊಂಡಿರುತ್ತಾರೆ.

v. ಅದೇ ದಿವಸ ತನಿಖಾಧಿಕಾರಿಗಳು ಲಂಚದ ಹಣ ರೂ. 10,000/- ಗಳನ್ನು ಮಹೇಶರವರಿಂದ, ಲಂಚದ ಹಣ ರೂ. 5,000/- ಗಳನ್ನು ಮಹಾಂತೇಶ್‌ರವರಿಂದ ಪಂಚರ ಸಮಕ್ಷಮ ಅಮಾನತ್‌ಪಡಿಸಿಕೊಂಡಿರುತ್ತಾರೆ.

vi. ಎದುರುದಾರರು ಒಟ್ಟು ರೂ. 25,000/- ಲಂಚದ ಹಣಕ್ಕೆ ಬೇಡಿಕೆ ಇಟ್ಟಾಗ ದೂರುದಾರರು ಅಷ್ಟಾಗುವುದಿಲ್ಲ, ಬಡವನಿದ್ದೇನೆ ಎಂದು ಹೇಳಿಕೊಂಡಾಗ, ಸದ್ಯ ಬ್ಯಾಂಕಿಗೆ ಪತ್ರ ಕೊಡುವ ಕುರಿತು 8,000/- ರೂ. ಲಂಚದ ಹಣ ತೆಗೆದುಕೊಂಡು ಬ್ಯಾಂಕಿಗೆ ಕಾರ್ ಲೋನ್ ಮಾಡಲು ಪತ್ರ ಕೊಟ್ಟು ಉಳಿದ 15,000/- ರೂ.ಗಳನ್ನು ನಂತರ ಕೊಡುವಂತೆ ದೂರುದಾರರಿಗೆ ಹೇಳಿ ಕಳುಹಿಸಿರುತ್ತಾರೆ. ಸದರಿ ಹಣವನ್ನು ಮಹೇಶ್ ಹಾಗೂ ಮಹಾಂತೇಶ್ ರವರ ಮುಖಾಂತರ ಪಡೆದುಕೊಂಡಿದ್ದ ಕಾರಣಕ್ಕಾಗಿ ತನಿಖಾಧಿಕಾರಿಯವರು ದಸ್ತಗಿರಿ ಮಾಡಿರುತ್ತಾರೆ.

vii. ಸದರಿ ಹಣದ ಬಗ್ಗೆ ತನಿಖಾಧಿಕಾರಿಯು ಎದುರುದಾರರನ್ನು ವಿಚಾರಿಸಿದಾಗ ಸರಿಯಾದ, ತೃಪ್ತಿದಾಯಕವಾದ ಉತ್ತರ ಅಥವಾ ವಿವರಣೆ ಅಥವಾ ಲೆಕ್ಕ ನೀಡಿರುವುದಿಲ್ಲ.

viii. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರ ಅಂಶಗಳು, ಎದುರುದಾರರ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

3) ನಂತರ ಎದುರುದಾರರಿಂದ ಸದರಿ ಆರೋಪಗಳಿಗೆ ಸಂಬಂಧಿಸಿದಂತೆ, ಪರಿವೀಕ್ಷಣಾ ಟಿಪ್ಪಣಿಯನ್ನು ಕಳುಹಿಸಿ ಅವರಿಂದ ಆಕ್ಷೇಪಣೆಗಳನ್ನು ಕೇಳಲಾಯಿತು. ಎದುರುದಾರರು ಸದರಿ ಆಪಾದನೆಗಳನ್ನು ನಿರಾಕರಿಸಿ ತಮ್ಮ ಆಕ್ಷೇಪಣೆಗಳನ್ನು ದಿನಾಂಕ 23/07/2021 ರಂದು ಸಲ್ಲಿಸಿರುತ್ತಾರೆ. ಅದರಲ್ಲಿ ತಾನು ಕೆಲಸದಿಂದ ವಯೋ ನಿವೃತ್ತಿ ಹೊಂದಿರುತ್ತೇನೆಂದು ಸಹ ತಿಳಿಸಿರುತ್ತಾರೆ. ತನಿಖಾಧಿಕಾರಿಗಳ ವರದಿ ಮತ್ತು ಅದರೊಂದಿಗಿನ ದಾಖಲೆಗಳು ಹಾಗೂ ಸಾಕ್ಷಿದಾರರ ಹೇಳಿಕೆಗಳನ್ನು ಪರಿಗಣಿಸಿದಾಗ, ಎದುರುದಾರರ ಆಕ್ಷೇಪಣೆಗಳನ್ನು ಒಪ್ಪಲು ಈ ಹಂತದಲ್ಲಿ ಸಾಧ್ಯವಿರುವುದಿಲ್ಲ.

4) ಆದ್ದರಿಂದ ಈ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲೆಗಳು, ನೀಡಿರುವ ಮಾಹಿತಿಗಳು, ಇತ್ಯಾದಿಗಳಿಂದ ಎದುರುದಾರರು ದೂರುದಾರರಿಂದ ಅವರಿಗೆ ಸಹಾಯಧನ ಮಂಜೂರು ಮಾಡಲು 25,000/- ರೂ.ಗಳ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದೇ ದಿನ ರೂ. 8,000/- ಗಳನ್ನು ಸ್ವೀಕರಿಸಿ, ನಂತರ ರೂ. 15,000/- ಗಳನ್ನು ಅವರ ಕಛೇರಿ ಹೊರ ಗುತ್ತಿಗೆ ನೌಕರರಾದ ಶ್ರೀ ಮಹಾಂತೇಶರವರಿಂದ ದಿನಾಂಕ 27/02/2018 ರಂದು ಸ್ವೀಕರಿಸುವ ಮೂಲಕ ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) ನಿಯಮಗಳು 2021) ರ ನಿಯಮ 3 (1) (i) ರಿಂದ (iii) ನ್ನು ಉಲ್ಲಂಘಿಸಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಈ ಮೇಲ್ಕಂಡ ಅಂಶಗಳಿಂದಾಗಿ ಎದುರುದಾರರಾದ ಶ್ರೀ ನರಸಿಂಗ್ ಬಿನ್ ಗಣಪತಿ ಚೌದರಿ, ಪ್ರಭಾರ ಜಿಲ್ಲಾ ವ್ಯವಸ್ಥಾಪಕರು, ಡಾ. ಬಿ.ಆರ್. ಅಂಬೇಡ್ಕರ ಅಭಿವೃದ್ಧಿ ನಿಗಮ (ಮೂಲ ಹುದ್ದೆ ತಾಲೂಕಾ ಅಭಿವೃದ್ಧಿ ಅಧಿಕಾರಿಗಳು, ಗ್ರೇಡ್-2), ಯಾದಗಿರಿ ಜಿಲ್ಲೆ ಇವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು

ಮತ್ತು ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14–ಎ ರ ಅಡಿಯಲ್ಲಿ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (3) ರನ್ವಯ ಪ್ರದತ್ತವಾದ ಅಧಿಕಾರದಡಿ, ಸಕ್ಷಮ ಪ್ರಾಧಿಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.

5) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

23/9/21

**(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)**
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.